ಕೂಡ ಅಲ್ಲಿಗೆ ಕಳುಹಿಸಿದ್ದೇವೆ. ಈಗ ಸ್ವಲ್ಪ ತಡ ಆಗಿದೆ ನಿಜ. ವಿಶ್ವಬ್ಯಾಂಕ್‌ನಿಂದ ಅಪ್ರೂವಲ್ ಆಗಿ ಬಂದ ನಂತರ ಕೆಲಸ ಶುರು ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ಇದನ್ನು ಫೈನಲ್ ಮಾಡಿದಂತಹ ಡೇಟ್ ಯಾವುದು? ವಿಶ್ವಬ್ಯಾಂಕ್‌ಗೆ ಕಳುಹಿಸಿರುವ ತಾರೀಖು ಯಾವುದು? ಇದನ್ನು ನಿಖರವಾಗಿ ದಯಮಾಡಿ ಹೇಳುವಿರಾ?

ಅಧ್ಯಕ್ಷರು : ನಿಮಗೆ ಹೆಚ್ಚಿನ ಮಾಹಿತಿ ಬೇಕಾದರೆ ಮಾನ್ಯ ಮಂತ್ರಿಗಳು ತರಿಸಿಕೊಡುತ್ತಾರೆ. ಈಗ ಪ್ರಶ್ನೋತ್ತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ 2ನೇ ಪಟ್ಟಿಯಲ್ಲಿರುವ 19 ಪ್ರಶ್ನೆಗಳ ಪೈಕಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ರಾಷ್ಟ್ರೀಯ ಕ್ರೀಡಾ ಕೂಟಕ್ಕಾಗಿ ನಡೆಸಿರುವ ಸಿದ್ಧತೆಗಳ ಬಗ್ಗೆ

271 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜೀರಾದ್) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಬರುವ ವರ್ಷದಲ್ಲಿ ರಾಜ್ಯದಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡಾ ಕೂಟಕ್ಕಾಗಿ ಯಾವ ಯಾವ ಸಿದ್ಧತೆಗಳನ್ನು ಮಾಡಲಾಗುತ್ತಿದೆ?

ಆ) ಈ ಸಂಬಂಧವಾಗಿ ಯಾವ ಯಾವ ಸಮಿತಿಗಳನ್ನು ನೇಮಕ ಮಾಡಲಾಗಿದೆ?

ಇ) ಈ ಸಮಿತಿಗಳು ಇದುವರೆವಿಗೂ ಎಷ್ಟು ಭಾರಿ ಸಭೆಗಳನ್ನು ನಡೆಸಿ ಯಾವ ಯಾವ ತೀರ್ಮಾನಗಳನ್ನು ಕೈಗೊಂಡಿದೆ?

ಈ) ಈ ಕ್ರೀಡಾಕೂಟಕ್ಕಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವು ಬಂದಿದೆಯೇ?

ಉ) ಬಂದಿದಲ್ಲಿ, ಎಷ್ಟು ಮೊತ್ತದ ಹಣಕಾಸಿನ ನೆರವು ಬಂದಿದೆ. ರಾಜ್ಯ ಸರ್ಕಾರವು ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಿದೆ? ಇದುವರೆವಿಗೂ ಎಷ್ಟು ಹಣವನ್ನು ಯಾವ ಯಾವ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ?

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು):

ಅ) ಮುಂಬರುವ ರಾಷ್ಟ್ರೀಯ ಕ್ರೀಡಾ ಕೂಟವನ್ನು 1996ರ ಜನವರಿ 28ರಿಂದ ಫೆಬ್ರವರಿ 7 ರವರೆಗೆ ನಡೆಸಲು ಕ್ರೀಡಾಂಗಣದ ಸೌಲಭ್ಯಗಳನ್ನು ವಿಸ್ತರಿಸಲಾಗುತ್ತಿದೆ. ಕರ್ನಾಟಕ ಗೃಹಮಂಡಳಿ ಮೂಲಕ ಕ್ರೀಡಾ ಗ್ರಾಮ ನಿರ್ಮಾಣ ನಡೆಯುತ್ತಿದೆ. ಉಳಿದಂತೆ ವಿವಿಧ ಸ್ಪರ್ಧೆಗಳು ನಡೆಯುವ ಸ್ಥಳಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲು ಪೂರ್ವಭಾವಿ ಸಿದ್ಧತೆಗಳನ್ನು ಮಾಡಲಾಗುತ್ತಿದೆ.

ಆ) ರಾಷ್ಟ್ರೀಯ ಕ್ರೀಡಾ ಕೂಟಕ್ಕಾಗಿ ಈ ಕೆಳಗೆ ಕಾಣಿಸಿದ ಸಮಿತಿಗಳನ್ನು ನೇಮಕ ಮಾಡಲಾಗಿದೆ.

1) ವ್ಯವಸ್ಥಾಪಕ ಸಮಿತಿ
2) ಕ್ರೀಡಾ ಸೌಲಭ್ಯ ಸಮಿತಿ
3) ಪ್ರಚಾರ ಸಮಿತಿ

4) ವಸತಿ ಸಮಿತಿ
5) ಆರ್ಥಿಕ ಸಮಿತಿ
6) ಕ್ರೀಡಾ ತಾಂತ್ರಿಕ ಸಮಿತಿ

ಹಾಗೂ ಆರ್ಥಿಕ ಉಪಸಮಿತಿ ಮತ್ತು ಅಧಿಕಾರಯುತ ಸಮಿತಿಗಳನ್ನು ರಚಿಸಲಾಗಿದೆ.

ಇ) ವ್ಯವಸ್ಥಾಪಕ ಸಮಿತಿ 2, ಕ್ರೀಡಾ ಸೌಲಭ್ಯ ಸಮಿತಿ 12, ಚಾಲನಾ ಸಮಿತಿ 5, ವಸತಿ ಸಮಿತಿ 1, ಆರ್ಥಿಕ ಸಮಿತಿ 1, ಆರ್ಥಿಕ ಉಪಸಮಿತಿ 2 ಮತ್ತು ಅಧಿಕಾರಯುತ ಸಮಿತಿ 8 ಭಾರಿ ಸಭೆ ಸೇರಿದ್ದು, ಈ ಕೆಳಕಂಡ ವಿಷಯಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

1) ವಿವಿಧ ಕ್ರೀಡಾ ಸ್ಪರ್ಧೆಗಳ ಸ್ಥಳಗಳು
2) ವಿವಿಧ ಕ್ರೀಡೆಗಳ ದಿನಾಂಕಗಳು
3) ವಿವಿಧ ಕ್ರೀಡಾಂಗಣಗಳ ನಿರ್ಮಾಣ
4) ಸಂಪನ್ಮೂಲಗಳ ಕ್ರೋಢೀಕರಣ
5) ವಾಸ್ತುಶಿಲ್ಪಿಗಳು ಮತ್ತು ಗುತ್ತಿಗೆದಾರರ ಆಯ್ಕೆ ಹಾಗೂ
6) ಇತರೆ ಪೂರ್ವಭಾವಿ ಕ್ರೀಡಾ ಸೌಲಭ್ಯಗಳು

ಈ) ಇನ್ನೂ ಬಂದಿರುವುದಿಲ್ಲ.

ಉ) ರಾಜ್ಯ ಸರ್ಕಾರವು ಸುಮಾರು ರೂ. 10.00 ಕೋಟಿಗಳಷ್ಟು ವೆಚ್ಚ ಮಾಡಲಿದೆ. ಈ ಪೈಕಿ ರೂ. 1.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ವಿವಿಧ ಸೌಲಭ್ಯಗಳನ್ನು ಸೃಷ್ಟಿಸುವ ಸಲುವಾಗ ವಾಸ್ತುಶಿಲ್ಪಿಗಳಿಗೆ ಶುಲ್ಕ, ಗುತ್ತಗೇದಾರರ ಮುಂಗಡ, ಕಛೇರಿ ನಿರ್ವಹಣೆ ಮುಂತಾದ ಬಾಬ್ತುಗಳಿಗಾಗಿ ರೂ. 2,07,45,397-00ಗಳನ್ನು ಖರ್ಚು ಮಾಡಲಾಗಿದೆ.

ವೃತ್ತಿ ಪರೀಕ್ಷೆಗಳಿಗೆ ನಡೆಸಲಾಗುತ್ತಿರುವ ಪ್ರವೇಶ ಪರೀಕ್ಷೆಯನ್ನು ರದ್ದುಪಡಿಸುವುದು

272 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ರಾಜ್ಯದಲ್ಲಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಪ್ರವೇಶಕ್ಕಾಗಿ ಆಯ್ಕೆ ಮಾಡಲು ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತಿದೆಯೇ?

ಆ) ಈ ಪ್ರವೇಶ ಪರೀಕ್ಷೆಯನ್ನು ನಡೆಸುತ್ತಿರುವ ಉದ್ದೇಶವೇನು?

ಇ) ಈ ಪ್ರವೇಶ ಪರೀಕ್ಷೆಯನ್ನು ರದ್ದು ಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಈ) ಒಂದು ವೇಳೆ ಈ ಪ್ರವೇಶ ಪರೀಕ್ಷೆಗಳನ್ನು ರದ್ದುಪಡಿಸಿದ್ದರೆ ಕಷ್ಟಪಟ್ಟು ಓದು ಹೆಚ್ಚು ಅಂಕಗಳನ್ನು ಗಳಿಸಿ ಮೆರಿಟ್ ಮೇಲೆ ಆಯ್ಕೆಯಾಗುತ್ತಿರುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ ಪ್ರವೇಶ ಪರೀಕ್ಷೆಗಳನ್ನು ಮುಂದುವರೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ವೃತ್ತಿಪರ ಕೋರ್ಸುಗಳಿಗೆ ಸೇರಲಿಚ್ಚಿಸುವ ವಿದ್ಯಾರ್ಥಿಗಳ ಗುಣಮಟ್ಟವನ್ನು ಏಕರೂಪವಾಗಿ ಪರಿಶೀಲಿಸಲು ಈ ಪರೀಕ್ಷೆ ನಡೆಸಲಾಗುವುದು.

ಇ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.